# 5

# ಸುಧಾರಣೆಯ ಸಮಯದ ಆರಾಧನೆಯಲ್ಲಿದ್ದ ವಾದ್ಯ ಸಂಗೀತ

ಸುಧಾರಣೆಯ ಸಮಯದಲ್ಲಿದ್ದವರು, ಹದಿನಾರನೇ ಶತಮಾನದ ಸಭೆಗಳನ್ನು ದೇವರ ವಾಕ್ಯಕ್ಕೆ ಸಮೀಪವಾಗಿ ನಡೆಸಲು ಪ್ರಯತ್ನಿಸಿದ ಜನರು ಆರಾಧನೆಯಲ್ಲಿ ವಾದ್ಯಗಳನ್ನು ನುಡಿಸುವ ಪ್ರಶ್ನೆಗಳನ್ನು ಎದುರಿಸಿದರು. ಅದು ರೋಮನ್ ಕೆಥೋಲಿಕರ ಆಚರಣೆಯೂ ಆಗಿತ್ತು. ಆ ಸಭೆಗಳವರು ವಿಗ್ರಹಗಳನ್ನು ದೂಪವನ್ನು ಮೇಣದ ಬತ್ತಿಗಳನ್ನು ಸ್ಮಾರಕ ವಸ್ತುಗಳನ್ನು ಹಾಗು ಇನ್ನೂ ಇತರೆ ಸಂಗತಿಗಳನ್ನು ಪರಿಚಯಿಸಿದ್ದರು[1] (ಹೋಲಿಸು 1328-84) ಜಾನ್ ಹಸ್‌ರವರು ಇದನ್ನೆ ಮಾಡಿದರು (ಹೋಲಿಸು 1369-1415) ಅವರು ಬೊಹೆಮಿಯದಲ್ಲಿದ್ದು, ಸಭಿಕರು ಒಟ್ಟಾಗಿ ಹಾಡುವದನ್ನು ಪ್ರೋತ್ಸಾಹಿಸಿದ್ದರು.[2]

ಮಾರ್ಟಿನ್ ಲೂಥರ್ (1483-1546)ರವರು, ಸುಧಾರಣಾ ಕ್ರಾಂತಿಯ ಮೂಲ ವ್ಯಕ್ತಿಯಾಗಿದ್ದರು, ಅವರು ವಾದ್ಯಗಳನ್ನಾಗಲೀ ಅಥವಾ ವಿಗ್ರಹಗಳನ್ನಾಗಲಿ ಪ್ರೋತ್ಸಾಹಿಸದೆ ಅದಕ್ಕೆ ವಿರುದ್ಧವಾಗಿದ್ದರು. ಇವುಗಳು ಸ್ವತಂತ್ರದ ಕುರುಹುಗಳಾಗಿದ್ದವು ಎಂದು ಅವರು ಸಲಹೆ ನೀಡಿದ್ದರು. ಜರ್ಮನಿಯ, ಗೆರಾರ್ಡ್ ಕಾರ್ಲ್ಸ್ಟ್‌ಟ್‌ರವರು (ಹೋಲಿಸು 1480-1541)ರವರು, ಸಹ ಇದನ್ನು ವಿರೋಧಿಸಿದ್ದರು. ವಾದ್ಯಗಳನ್ನು ಬಾರಿಸುವವನು ಅದನ್ನು ನುಡಿಸುವದರಲ್ಲಿ ತಲ್ಲೀನನಾಗಿರುವದರಿಂದ, ಅವನು ಆರಾಧನೆಯಲ್ಲಿ ಬಾಗಿಯಾಗಲು ಸಾಧ್ಯವಿಲ್ಲ ಎಂದು ಹೇಳಿದನು. ಕಾರ್ಲ್ಸ್ಟ್‌ಟ್‌ರವರು ಸಭೆಯಾಗಿ ಹಾಡುವದನ್ನು ಪ್ರೋತ್ಸಾಹಿಸಿದ್ದರು.

ಸ್ವಿಜರ್‌ಲ್ಯಾಂಡಿನ, ಜೂರಿಕ್‌ನಲ್ಲಿದ್ದ, ಹಲ್ಡ್ರಿಚ್ ಜ್ವಿಂಗ್ಲಿ (1484-1531), ಅವರು ಒಂದು ಪ್ರಮುಖವಾದ ಅಂಶವನ್ನು ಮನಗೊಂಡಿದ್ದರು. ಅವರು ಸ್ವತಃ ನುರಿತ ವಾದ್ಯಗಾರರಾಗಿದ್ದರೂ, ಕ್ರಿಸ್ತನ ಅಪ್ಪಣೆಯ ಮೇರೆಗೆ, ಹೊಸ ಒಡಂಬಡಿಕೆಯ ಸಭೆಯು ಒಳಪಡಬೇಕು ಎಂದು ಪ್ರತಿಪಾದಿಸಿದರು. ಕ್ರಿಸ್ತನ ಅಪ್ಪಣೆಗೆ ವಿರುದ್ಧವಾಗಿ, ಯಾವುದನ್ನಾದರು ಸೇರಿಸಿದರೆ ಅದು ತಿರಸ್ಕಾರವೇ ಎಂದು ಹೇಳಿದರು. ಈ ಕರೆಯ ಮೇರೆಗೆ ಜನರ ಪ್ರತಿಕ್ರಿಯೇ ಕೆಲವು ಸಭೆಗಳಲ್ಲಿ ಆರಾಧನೆಗೆ ಬಳಸುತ್ತಿದ್ದ ಆರ್ಗನ್‌ಗಳನ್ನು ನಿಷೇಧಿಸಿದರು. ಹೇಗೂ ಜ್ವಿಂಗ್ಲಿಯವರು ಎಫೆಸ 5:19 ಮತ್ತು ಕೊಲೊಸ್ಸೆ 3:16ರನ್ನು ಗಂಭೀರವಾಗಿ ಪರಿಗಣಿಸಿದ್ದರಿಂದ, ಅದು ಅಂತರಾಳದ ಗಾನವಾಗಬೇಕೆ ವಿನಃ ಸ್ವರವೆತ್ತಿ ಹಾಡಬಾರದು ಎಂದು ಸಹ ಪ್ರತಿಪಾದಿಸಿದ್ದರು. ಆದುದರಿಂದ ಅವರು ಜೂರುಕನ್ ಸಭೆಯಲ್ಲಿ ಹಾಡಬಾರದು ಎಂದು ಸಹ ಪ್ರತಿಪಾದಿಸಿದ್ದರು. ಆದುದರಿಂದ ಅವರು ಜೂರಿಕನ್ ಸಭೆಯಲ್ಲಿ ಸ್ವರವೆತ್ತಿ ಹಾಡುವದನ್ನು ಸಹ ನಿಷೇದಿಸಿದ್ದರು. ಅವರು ಸ್ವಂತ ಆನಂದಕ್ಕಾಗಿ, ಅವರ ಮನೆಯಲ್ಲಿ ಮಾತ್ರ ವಾದ್ಯಗಳನ್ನು ನುಡಿಸುತ್ತಿದ್ದರು (1504-75), ಜ್ವಿಂಗ್ಲಿಯವರ ಅನುಯಾಯಿಯಾದ, ಹನ್ರಿಚ್ ಬಲಿಂಗಲ್‌ರವರು ಸಹ, ಸಭೆಯಲ್ಲಿ ವಾದ್ಯರಹಿತ ಸಂಗೀತವನ್ನು ಪ್ರೊತ್ಸಾಹಿಸಿದ್ದರು.

ಫ್ರಾನ್ಸ್ ಮತ್ತು ಸ್ವಿಜರ್‌ಲ್ಯಾಂಡಿನಲ್ಲಿ ಸುಧಾರಣೆಯನ್ನು ಮುಂದುವರೆಸಿದ ಜಾನ್ ಕ್ಯಾಲ್ವಿನ್ (1509-64)ರವರು, "ನಮಗೆ ಸರಿತೋರುವ ಯೋಜನೆಗಳನ್ನು ನಾವು ಅಳವಡಿಸಿಕೊಳ್ಳದಿರಬಹುದು, ನಮಗೆ ಆಲೋಚನೆಗಳನ್ನು ನೀಡುವ ಆತನ ಆಲೋಚನೆಗಳನ್ನೇ ಪರಿಪಾಲಿಸಬೇಕು."[3] ಹೊಸ ಒಡಂಬಡಿಕೆಯಲ್ಲಿ ದಾಖಲಾಗದಿರುವ ಯಾವುದೇ ವಾದ್ಯಗಳ ಉದಾಹರಣೆಯು ಇಲ್ಲದೆ ಇರುವದರಿಂದ, ನಾವು ಅವುಗಳನ್ನು ಸಭೆಯೊಳಗೆ ತರುವ ಅಧಿಕಾರವು ಇರುವದಿಲ್ಲ. ವ್ಯಯಕ್ತಿಕವಾಗಿ ಅದನ್ನು ಖಾಸಗಿಯಾಗಿ ಉಪಯೋಗಿ

ಸಲು ನಿರ್ಭಂಧವಿರುವದಿಲ್ಲ ಎಂದು ಕ್ಯಾಲ್ವಿನ್‌ರವರು ತಿಳಿಸಿರುವರು. ಜೆನೀವಾದದಲ್ಲಿದ್ದ ಕ್ಯಾಲ್ವಿನನ ಅನುಯಾಯಿ ಆಗಿದ್ದ ಥಿಯೇಡರ್ ಬೇಜಾ ಸಹ (1519-1605), ವಾದ್ಯ ಸಹಿತ ಆರಾಧನೆಯನ್ನು ಪ್ರೋತ್ಸಾಹಿಸಲಿಲ್ಲ.

ನೆದರ್‌ಲ್ಯಾಂಡಿನಲ್ಲಿ, ಈ ದಿವಸಗಳಲ್ಲಿ ಕರೆಯಲ್ಪಡುವ ಮಹತ್ವದ ಸುಧಾರಣೆಯಲ್ಲಿ ಮೆನನ್ ಸೈಮನ್ಸ್ (ಹೋಲಿಸು 1496-1561), ದೇವರ ವಾಕ್ಯದ ಅಪ್ಪಣೆಯನ್ನು ಮೀರುವ ಸಂಗತಿಗಳನ್ನು ನಿರ್ಭಂದಿಸಬೇಕು ಎಂದು ತಿಳಿಸಿರುವನು. ಜಾನ್‌ನಾಕ್ಸ್ (ಹೋಲಿಸು 1514-72) ಸಹ, ಈ ವಿಷಯಗಳನ್ನು ಸಾಟ್‌ಲ್ಯಾಂಡಿನಲ್ಲಿ ಪ್ರತಿಪಾದಿಸಿದನು. ಸ್ಕಾಟಿಶ್ ಸಭೆಗಳು ಇದನ್ನು ಬಹುವಾಗಿ ವಿರೋಧಿಸಿದರು. ಆದಿಯಲ್ಲಿದ್ದ ಆಂಗ್ಲ ಸುಧಾರಕರು ವಾದ್ಯಗಳನ್ನು ವಿರೋಧಿಸಿದರು, ಆದಾಗ್ಯೂ ಆಂಗ್ಲ ಸಭೆಗಳು ಅದನ್ನು ಪ್ರಯೋಗಿಸುವ ಆಚರಣೆಗೆ ತಂದರು. ಆದಿ ಪುರತಾನದವರು, ಹೊಸ ಒಡಂಬಡಿಕೆಯ ಆಜ್ಞೆಗಳನ್ನು ಮತ್ತು ಮಾದರಿಗಳನ್ನು ಚಾಚುತಪ್ಪದೆ ಪಾಲಿಸಿ, ವಾದ್ಯಗಳನ್ನು ನಿರಾಕರಿಸಿದರು.[4]

ಅಮೇರಿಕದ ಪುರತಾನದವರು ಮತ್ತು ಬೋಸ್ಟನ್ ಪುರತಾನದವರು ಸಹ ಈ ವಿಷಯವನ್ನು ಪಾಲಿಸಿದರು. ಕಾಟನ್ ಮಾದರ್ (1663-1728) ಹೇಳಿಕೆ ಏನೆಂದರೆ, "ದೇವರ ಆರಾಧನೆಯಲ್ಲಿ ವಾದ್ಯಗಳನ್ನು ಉಪಯೋಗಿಸುವ ಕುರಿತು, ಹೊಸ ಒಡಂಬಡಿಕೆಯಲ್ಲಿ, ಯಾವ ಸ್ಥಳದಲ್ಲಿಯೂ ಪ್ರಸ್ತಾಪಿಸಿರುವದಿಲ್ಲ."[5]

ಪ್ರಸಿದ್ಧಿ ಪಡೆದಿರುವ ಮೆಥೋಡಿಸ್ಟ್‌ನ ವಿವರಣೆಕಾರರಾದ ಮಾಥ್ಯೂ ಹೆನ್ರಿಯವರು (1661-1714), ಸಹ ಸಂಗೀತವನ್ನಾಗಲೀ, ನೃತ್ಯವನ್ನಾಗಲೀ ಒಪ್ಪಿಕೊಳ್ಳಲಿಲ್ಲ. ಅವೆರಡು ಒಟ್ಟಾಗಿ ಚಲಿಸುತ್ತವೆ ಎಂದು ತಿಳಿಸಿದರು. ಪ್ರಸಿದ್ಧಿ ಹೊಂದಿದ್ದ ಮೊದಲನೆ ಆಂಗ್ಲ ಸಂಗೀತ ರಚನೆಕಾರರಾದ, ಐಸಾಕ್ ವಾಟ್ಸ್ (1674-1748)ರವರು ಸಹ, ಹಳೆ ಒಡಂಬಡಿಕೆಯ ಮತ್ತು ಪ್ರಕಟನೆಗಳಲ್ಲಿ ಒಳಗೊಂಡಿರುವ ವಾದ್ಯಗಳ ಕುರಿತ ವಾದವನ್ನು ಮಂಡಿಸಿರುವರು. ಪ್ರಸಿದ್ಧರಾದ ಬಾಪ್ಟಿಸ್ಟ್ ಪ್ರಸಂಗಿಗಳಾದ ಚಾಲ್ಸ್ ಸ್ಪರ್ಜನ್ (1834-92), ಸಹ 1880ರಲ್ಲಿಯೇ, ವಾದ್ಯ ಸಂಗೀತವನ್ನು ನಿರಾಕರಿಸಿದ್ದರು. ಕೀರ್ತನೆ 42:4ರ ಚರ್ಚೆಯಲ್ಲಿ, "ನಾವು ಅದನ್ನು ಕೊಂಡಾಡುವದಕ್ಕಿಂತ, ಪ್ರಾರ್ಥಿಸುವುದು ಉತ್ತಮ"[6] ಎಂದು ಹೇಳಿಕೆಯನ್ನು ನೀಡಿರುವರು.

---

ಟಿಪ್ಪಣಿಗಳು

[1]Gotthard Lechler, *John Wycliffe and His English Precursors*, trans. Peter Lorimon (London: Religious Tract Society, 1884), 298. [2]Gustave Reese, *Music in the Renaissance* (New York: W. W. Norton & Co., 1959), 732-33. [3]John Calvin, *The Necessity of Reforming the Church* (Edinburgh: Calvin Translation Society, 1844; reprint, Dallas: Protestant Press, 1999), 16. [4]Henry Wilder Foote, *Three Centuries of American Hymnody* (Cambridge, Mass.: Harvard University Press, 1940; reprint, Hamden, Conn.: Archon Books, 1968), 76-79. [5]Cotton Mather, *The Great Works of Christ in America* (London: N.p., 1702; reprint, Edinburgh: Banner of Truth Trust, 1979), 2:266. [6]Charles H. Spurgeon, *The Treasury of David* (Grand Rapids, Mich.: Zondervan, 1957), 1:272